ಚುಟುಕು ಸುದ್ದಿ

ಬಸ್-ಲಾರಿ ಡಿಕ್ಕಿ: 25 ಪ್ರಯಾಣಿಕರಿಗೆ ಗಾಯ

ಬ್ಯಾಡಗಿ: ಬೆಂಗಳೂರಿನಿಂದ ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ ಖಾಸಗಿ ಬಸ್-ಲಾರಿ ನಡುವೆಡಿಕ್ಕಿ ಹೊಡೆದ ಪರಿಣಾಮ 25 ಪ್ರಯಾಣಿಕರಿಗೆ ಸಣ್ಣಪುಟ್ಟಗಾಯಗೊಂಡಘಟನೆತಾಲೂಕಿನಛತ್ರದಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಮಂಗಳವಾರಜರುಗಿದೆ.

ಈ ಪೈಕಿ ನಾಲ್ವರಿಗೆತೀವ್ರಗಾಯವಾಗಿದ್ದು ಇನ್ನುಳಿದವರಿಗೆ ಸಣ್ಣಪುಟ್ಟಗಾಯವಾಗಿದ್ದುಜಿಲ್ಲಾಸ್ಪತ್ರೆಗೆದಾಖಲಿಸಲಾಗಿದೆ.ಈ ಕುರಿತು ಬ್ಯಾಡಗಿ ಪೋಲಿಸ್ ಠಾಣೆಯಲ್ಲಿಪ್ರಕರಣದಾಖಲಾಗಿದೆ.

ಬಹುಮಾನಗಳ ಸರದಾರ ಗಾಡಾ ಹುಲಿ ಹೋರಿ ಸಾವು

36 ಬೈಕ್, 20 ತೊಲೆ ಚಿನ್ನ ಸೇರಿ ಲಕ್ಷಾಂತರ ರುಪಾಯಿ ಬಹುಮಾನ ಗೆದ್ದಿದ್ದ ಬಸವಣ್ಣ



ಉದಯಕಾಲ ನ್ಯೂಸ್

ಹಾವೇರಿ: ರಾಜ್ಯಮಟ್ಟದ ಗಾಡಾ ಸ್ಪರ್ಧೆಗಳಲ್ಲಿ ತನ್ನದೇ ಆದ ಛಾಪು ಮೂಡಿಸಿ, ಹಲವು ಬಹುಮಾನಗಳನ್ನು ಗೆಲ್ಲುವ ಮೂಲಕ ಪ್ರಸಿದ್ಧಿ ಪಡೆದಿದ್ದ ಸಮೀಪದ ತೋಟದಯಲ್ಲಾಪುರದ 'ಗಾಡಾ ಹುಲಿ ಖ್ಯಾತಿಯ ಹೋರಿ ತೀವ್ರ ಅನಾರೋಗ್ಯದಿಂದ ನಿಧನವಾಗಿದೆ.

ತನ್ನ ಶಕ್ತಿ, ವೇಗ ಹಾಗೂ ಪ್ರದರ್ಶನದ ಮೂಲಕ ರಾಜ್ಯದ ವಿವಿಧೆಡೆ ನಡೆದ ಗಾಡಾ ಸ್ಪರ್ಧೆಗಳಲ್ಲಿ ಗಮನ ಸೆಳೆದಿದ್ದ ಈ ಹೋರಿ, ಮಾಲೀಕ ನಿಂಗನಗೌಡ ಹೊಟ್ಟಿಗೌಡರ ಅವರಿಗೆ ಅಪಾರ ಕೀರ್ತಿ ತಂದುಕೊಟ್ಟಿತ್ತು. ಸ್ಪರ್ಧೆಗಳಲ್ಲಿ ಈವರೆಗೆ 36 ಬೈಕ್, 8 ಜೋಡಿ ಎತ್ತುಗಳು, 20 ತೊಲೆ ಚಿನ್ನ ಹಾಗೂ ಅಂದಾಜು 10ರಿಂದ 12 ಲಕ್ಷ ರು. ನಗದು ಬಹುಮಾನ ಗೆದ್ದಿತ್ತು. ಈ ಮೂಲಕ ಗಾಡಾ ಸ್ಪರ್ಧೆಯ ವಲಯದಲ್ಲಿ 'ಗಾಡಾ ಹುಲಿ' ಎಂದೇ ಹೆಸರಾಗಿತ್ತು.

ಹೋರಿಯ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಮಾಲೀಕರ ಕುಟುಂಬಸ್ಥರು, ಗ್ರಾಮಸ್ಥರು ಹಾಗೂ ಅಭಿಮಾನಿಗಳು ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಹಲವು ವರ್ಷಗಳಿಂದ ಸ್ಪರ್ಧೆಗಳಲ್ಲಿ ಸಂಭ್ರಮ ಮೂಡಿಸಿದ್ದ ನೆಚ್ಚಿನ ಹೋರಿಯ ಅಗಲಿಕೆ ಅಭಿಮಾನಿಗಳಲ್ಲಿ ಶೋಕ ಮೂಡಿಸಿದೆ. ಕುಟುಂಬದವರು ಮೃತ ಹೋರಿಯ ಅಂತ್ಯಸಂಸ್ಕಾರವನ್ನು ಗೌರವಯುತವಾಗಿ ನೆರವೇರಿಸಿದರು. ಈ ಹೋರಿ ನಮ್ಮ ಕುಟುಂಬವಷ್ಟೇ ಅಲ್ಲದೇ ಗ್ರಾಮಕ್ಕೆ ಹೆಸರು ತಂದಿತ್ತು. 20 ವರ್ಷ ವಯಸ್ಸಿನ ಹೋರಿ, ಕಳೆದ 15 ವರ್ಷಗಳಿಂದಲೂ ನಮ್ಮ ಮನೆಯ ಸದಸ್ಯನಂತೆ ಇತ್ತು. ಹೋರಿಯ ನಿಧನದಿಂದ ಬೇಸರವಾಗಿದೆ ಎಂದು ನಿಂಗನಗೌಡ ಹೊಟ್ಟಿಗೌಡರ ಹೇಳಿದರು.

ಕ್ರಿಯಾಶೀಲವಾಗಿ ಕೆಲಸಕ್ಕೆ ಅಧಿಕಾರಿಗಳು ಸಹಕರಿಸಿ: ಅಶೋಕ ಮಂದಾಲಿ

ಉದಯಕಾಲ ನ್ಯೂಸ್

ಗದಗ: ವಾರ್ಡ ಹಾಗೂ ಗ್ರಾಮವಾರು ಗ್ಯಾರಂಟಿ ಯೋಜನೆ ಸಮಿತಿಗಳನ್ನು ರಚಿಸಲಾಗಿದ್ದು ಸಮಿತಿ ಸದಸ್ಯರುಗಳು ಪಂಚ ಗ್ಯಾರಂಟಿ ಯೋಜನೆಗಳ ಸೌಲಭ್ಯ ಅರ್ಹರಿಗೆ ವಿಳಂಬವಿಲ್ಲದೇ ಸಕಾಲದಲ್ಲಿಯೇ ತಲುಪಿಸಲು ಕ್ರಿಯಾಶೀಲವಾಗಿ ಕೆಲಸ ನಿರ್ವಹಿಸಲು ಇಲಾಖೆಗಳ ಅಧಿಕಾರಿಗಳು ಸೂಕ್ತ ಸಹಕಾರ ನೀಡಬೇಕು. ಗ್ಯಾರಂಟಿ ಯೋಜನೆಗಳ ಸೌಲಭ್ಯ ವಿತರಣೆಯು ಶೇ 100 ರಷ್ಟು ಪ್ರಗತಿ ಸಾಧಿಸಲು ಕೈ ಜೋಡಿಸಬೇಕೆಂದು ಗದಗ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ತಿಳಿಸಿದರು.



ನಗರದ ಜಿಲ್ಲಾ ಪಂಚಾಯತ್ ವಿ.ಸಿ. ಹಾಲ್ ದಲ್ಲಿ ಸೋಮವಾರ ಗದಗ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯುವನಿಧಿ ಯೋಜನೆಯಡಿ ಗದಗ ತಾಲೂಕಿನಲ್ಲಿ ಆಗಸ್ಟ 2026 ರವರೆಗೆ 3593 ಅಭ್ಯರ್ಥಿಗಳು ನೊಂದಣಿಯಾಗಿದ್ದು 3157 ಅರ್ಹ ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಹಣ ವರ್ಗಾವಣೆಯಾಗಿರುತ್ತದೆ. ಬಾಕಿ ಉಳಿದ 436 ಅಭ್ಯರ್ಥಿಗಳು ಯುವ ನಿಧಿ ಯೋಜನೆಯ ಷರತ್ತುಗಳಿಗೆ ಹಂತ ಹಂತವಾಗಿ ಅರ್ಹರಾಗುತ್ತಾರೆ.

ಶಕ್ತಿ ಯೋಜನೆಯಡಿ ಗದಗ ಘಟಕದಲ್ಲಿ ದಿ:11-6-2023 ರಿಂದ 12-11-2026 ರವರೆಗೆ ಮಹಿಳಾ ಪ್ರಯಾಣಿಕರಿಂದ 11731.94 ಲಕ್ಷ ರೂ. ಆದಾಯವಾಗಿರುತ್ತದೆ. ದಿ: 11-6-2023 ರಿಂದ 12-11-2026 ರವರೆಗೆ ಬೆಟಗೇರಿ ಘಟಕದಲ್ಲಿ ಮಹಿಳಾ ಪ್ರಯಾಣಿಕರಿಂದ 6886.07 ಲಕ್ಷ ರೂ. ಆದಾಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಶ್ರೀಮತಿ ನೀಲಮ್ಮ ಬೋಳಣ್ಣವರ, ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯರುಗಳಾದ ಶರೀಫ್ ಬಿಳೆಯಲಿ, ಶಂಭು ಕಾಳೆ, ಶ್ರೀಮತಿ ಮೀನಾಕ್ಷಿ ಬೆನಕಣ್ಣವರ, ದಯಾನಂದ ಪವಾರ, ಸಂಗು ಕರಕಲಮಟ್ಟಿ, ನಿಂಗಪ್ಪ ದೇಸಾಯಿ, ಸಂಗಮೇಶ ಹಾದಿಮನಿ, ರಮೇಶ ಹೊನ್ನಿನಾಯ್ಕರ, ಮಲ್ಲಪ್ಪ ದಂಡಿನ, ಮಲ್ಲಪ್ಪ ಬಾರಕೇರ, ಶ್ರೀಮತಿ ಸಾವಿತ್ರಿ ಹೂಗಾರ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಡಾ.ಎಚ್.ಎಸ್. ಜಿನಗ, ಗ್ಯಾರಂಟಿ ಯೋಜನೆಗೆ ಸಂಬಂಧಿತ ಅಧಿಕಾರಿಗಳು ಹಾಜರಿದ್ದರು.

ಸರ್ಕಾರದ ಸಾಧನೆ ದಾಖಲಿಸಿರುವುದು ಅಭಿನಂದನೀಯ: ಸೋಮಣ್ಣ ಬೇವಿನಮರದ



ಉದಯಕಾಲ ನ್ಯೂಸ್

ಶಿಗ್ಗಾವಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳು ಕಳೆದಿದ್ದು, ಈ ಅವಧಿಯಲ್ಲಿ ಮೂರು ವರ್ಷಗಳಿಗೂ ಹೆಚ್ಚು ಕಾಲ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಳಿತ ನಡೆಸಿದ್ದಾರೆ. ಇದೀಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಸರ್ಕಾರ ಜನಪರ ಕಾರ್ಯಕ್ರಮಗಳನ್ನು ಮುಂದುವರಿಸುತ್ತಿದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು.

ಪಟ್ಟಣದ ದಿಶಾ ಇಂಟರ್‌ನ್ಯಾಷನಲ್ ಸ್ಕೂಲ್ ಕಚೇರಿಯಲ್ಲಿ ಉದಯಕಾಲ ದಿನಪತ್ರಿಕೆ ಹೊರತಂದಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದ ನೂರು ದಿನಗಳ ಸಾಧನೆಗಳನ್ನು ದಾಖಲಿಸಿರುವ 'ನೂರು ದಿನ ನೂರಾರು ಸಾಧನೆ' ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಚುನಾವಣಾ ಪೂರ್ವದಲ್ಲಿ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜನರಿಗೆ ತಲುಪಿಸಲಾಗುತ್ತಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರದ ನೂರು ದಿನಗಳ ಸಾಧನೆಗಳನ್ನು ಪುಸ್ತಕದ ಮೂಲಕ ಹೊರ ತಂದಿರುವುದಕ್ಕೆ ಸಂತೋಷವಾಯಿತು. ಸರ್ಕಾರದ ಸಾಧನೆಗಳನ್ನು ಗುರುತಿಸಿ, ದಾಖಲಿಸಿ ಜನರಿಗೆ ತಲುಪಿಸುತ್ತಿರುವ ಉದಯಕಾಲ ದಿನಪತ್ರಿಕೆಯ ಕಾರ್ಯ ಅಭಿನಂದನೀಯ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಅವರು ದೂರದೃಷ್ಟಿಯ ರಾಜಕಾರಣಿಯಾಗಿದ್ದು, ಎಲ್ಲ ಸಮುದಾಯಗಳ ಜನರ ಅನುಕೂಲಕ್ಕಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಜನಪರ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಬಂಕಾಪುರ ಪುರಸಭೆ ನಾಮನಿರ್ದೇಶಿದ ಸದಸ್ಯರಾದ ಬಸವರಾಜ ಕಟ್ಟಿಮನಿ, ಪತ್ರಕರ್ತ ಶಿವಾನಂದ ದೊಡ್ಡಮನಿ, ಮಂಜುನಾಥ ಹೆಚ್ ಉಪಸ್ಥಿತರಿದ್ದರು.

ಮಹಿಳಾ ಉದ್ಯಮಿಗಳ ಉತ್ಪನ್ನ ಪ್ರದರ್ಶನ-ಮಾರುಕಟ್ಟೆ ಸಂಪರ್ಕ ಸಮಾವೇಶ

ಉದಯಕಾಲ ನ್ಯೂಸ್

ಹಾನಗಲ್: ತಾಲೂಕಿನ ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಹಾಗೂ ಅವರ ಉದ್ಯಮಗಳಿಗೆ ಹೊಸ ಅವಕಾಶಗಳ ಬಾಗಿಲು ತೆರೆಯುವ ಉದ್ದೇಶದಿಂದ ಮಂಗಳವಾರ ನಾಲ್ಕರ ಕ್ರಾಸ್ ಬಳಿಯ ರೋಶನಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಹಾನಗಲ್ ಮಹಿಳಾ ಉದ್ಯಮಿಗಳ ಉತ್ಪನ್ನ ಪ್ರದರ್ಶನ ಮತ್ತು ಮಾರುಕಟ್ಟೆ ಸಂಪರ್ಕ ಸಮಾವೇಶ ಯಶಸ್ವಿಯಾಗಿ ಜರುಗಿತು.

ಸಮಾವೇಶದಲ್ಲಿ ತಾಲೂಕಿನ 145 ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳು ತಾವು ತಯಾರಿಸಿದ ವೈವಿಧ್ಯಮಯ 200 ಕ್ಕಿಂತ ಅಧಿಕ ಉತ್ಪನ್ನಗಳನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ರೊಟ್ಟಿ, ಉಪ್ಪಿನಕಾಯಿ, ಮಸಾಲೆ, ಅರಿಷಿಣ ಪುಡಿ, ಖಾರದ ಪುಡಿ, ಚಕ್ಕಲಿ, ಕೋಡುಬೇಳೆ, ಚಟ್ನಿಪುಡಿ, ಶೇಂಗಾ ಎಣ್ಣೆ, ಹಪ್ಪಳ, ಸಂಡಿಗೆ, ಹೋಳಿಗೆ ಸೇರಿದಂತೆ ಬಗೆಬಗೆಯ ಆಹಾರ ಉತ್ಪನ್ನಗಳು, ಎಂಬ್ರಾಯ್ಡರಿ ವರ್ಕ್, ಆರಿ ವರ್ಕ್, ಸೀರೆ ಕುಚ್ಚು ಸೇರಿದಂತೆ ಅಲಂಕಾರಿಕ ವಸ್ತುಗಳು, ಮೇಣದಬತ್ತಿಗಳು, ಕರ್ಪೂರ, ಹೆಣಿಗೆ ಚೀಲಗಳು, ಗಂಧದ ಮಾಲೆ, ಅಗರಬತ್ತಿ, ದೀಪದ ಬತ್ತಿ, ಕಸಬರಿಗೆ, ಉಲ್ಲನ್ ವರ್ಕ್ ಸೇರಿದಂತೆ ವಿವಿಧ ಗೃಹಬಳಕೆಯ ವಸ್ತುಗಳು ಪ್ರದರ್ಶನದಲ್ಲಿ ಗಮನ ಸೆಳೆದವು.

ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ್ದ ವರ್ತಕರು, ಖರೀದಿದಾರರು ಮತ್ತು ಆನ್‌ಲೈನ್ ಮಾರುಕಟ್ಟೆ ತಜ್ಞರು ಉತ್ಪನ್ನಗಳನ್ನು ವೀಕ್ಷಿಸಿ, ಮಹಿಳಾ ಉದ್ಯಮಿಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಆಸಕ್ತಿ ತೋರಿದರು. ಅಲ್ಲದೆ, ಉತ್ಪನ್ನಗಳ ಗುಣಮಟ್ಟ ಸುಧಾರಣೆ, ಆಕರ್ಷಕ ಪ್ಯಾಕಿಂಗ್, ಮಾರುಕಟ್ಟೆಯ ಬೇಡಿಕೆ ಹಾಗೂ ಮಾರಾಟದ ಹೊಸ ವಿಧಾನಗಳ ಕುರಿತು ಮಾರ್ಗದರ್ಶನ ನೀಡಿದರು. ಹಲವು ಮಹಿಳಾ ಉತ್ಪಾದಕರಿಗೆ ತಮ್ಮ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಯ ಗಡಿ ದಾಟಿಸಿ ವಿಶಾಲ ಮಾರುಕಟ್ಟೆಗೆ ಪರಿಚಯಿಸುವ ಅವಕಾಶ ಲಭಿಸಿತು. ಖರೀದಿದಾರರು ಹಾಗೂ ವರ್ತಕರೊಂದಿಗೆ ನೇರ ಸಂಪರ್ಕ ಸಾಧಿಸಲು ಸಾಧ್ಯವಾದದ್ದು ಮಹಿಳಾ ಉದ್ಯಮಿಗಳಲ್ಲಿ ಹೊಸ ಭರವಸೆ ಮತ್ತು ಸಂತಸ ಮೂಡಿಸಿತು.



ಸಮಾವೇಶ ಉದ್ಘಾಟಿಸಿ ಮಾತನಾಡಿದ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ, ಉದ್ಯಮಶೀಲತೆಯ ಮೊದಲ ಹೆಜ್ಜೆ ಮನೆಯಿಂದಲೇ ಆರಂಭವಾಗಬೇಕು. ಸಣ್ಣ ಪ್ರಮಾಣದಲ್ಲಿ, ಕೇವಲ ನೂರು ರೂಪಾಯಿಗಳಿಂದ ಆರಂಭವಾದ ಉದ್ಯಮಗಳು ಇಂದು ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುತ್ತಿರುವ ಅನೇಕ ಪ್ರೇರಣಾದಾಯಕ ಉದಾಹರಣೆಗಳಿವೆ. ಮಹಿಳೆಯರಲ್ಲಿ ಪರಿಶ್ರಮ, ಸೃಜನಶೀಲತೆ ಮತ್ತು ಸಾಧಿಸುವ ಛಲವಿದೆ. ಅವರ ಉತ್ಪನ್ನಗಳಿಗೆ ಗುಣಮಟ್ಟದ ಜೊತೆಗೆ ಸೂಕ್ತ ಮಾರುಕಟ್ಟೆ ಸಂಪರ್ಕ ದೊರೆತರೆ ಉದ್ಯಮದ ಬೆಳವಣಿಗೆಗೆ ವಿಫುಲ ಅವಕಾಶಗಳು ತೆರೆದುಕೊಳ್ಳಲಿವೆ. ಈ ನಿಟ್ಟಿನಲ್ಲಿ ಮಹಿಳಾ ಉದ್ಯಮಿಗಳಿಗೆ ಅಗತ್ಯ ಪ್ರೋತ್ಸಾಹ, ಮಾರ್ಗದರ್ಶನ ಹಾಗೂ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು ಎಂದು ಹೇಳಿದರು.

ಮಹಿಳಾ ಉತ್ಪಾದಕಿ ಚಿಂತನಾ, ಆನ್‌ಲೈನ್ ಮಾರುಕಟ್ಟೆ ತಜ್ಞ ದೇವೇಂದ್ರ ಬನ್ಸಾಲಿ ಮಾತನಾಡಿದರು. ಹ್ಯುಮ್ಯಾನಿಟಿ ಫೌಂಡೇಶನ್, ರೋಶನಿ ಸಮಾಜ ಸೇವಾ ಸಂಸ್ಥೆ, ಲೋಯಲಾ ವಿಕಾಸ ಕೇಂದ್ರ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿ?ನ್, ರಾಷ್ಟ್ರೀಯ ನಗರ ಸ್ವಯಂ ಉದ್ಯೋಗ ಯೋಜನೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ವರ್ತಕರ ಸಂಘದ ಆಶ್ರಯದಲ್ಲಿ ಸಮಾವೇಶ ಆಯೋಜಿಸಲಾಗಿತ್ತು. ಸ್ವಾತಿ ಮಾಳಗಿ, ಅನಿತಾ ಡಿಸೋಜಾ, ಫಾದರ್ ವಿನ್ಸೆಂಟ್ ಜೈಸನ್, ಹನುಮಂತಪ್ಪ ಮರಗಡಿ, ಈರಪ್ಪ ಬೈಲವಾಳ, ಗುರುರಾಜ ನಿಂಗೋಜಿ, ಆದರ್ಶ ಶೆಟ್ಟಿ, ಜಗದೀಶ ಕಮ್ಮಾರ ಇದ್ದರು.

ಇಂದು ಜಾಗೃತಿ

ಕಲಘಟಗಿ: ಪಟ್ಟಣದಲ್ಲಿ ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಹಾಗೂ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ಕಲಘಟಗಿ ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ನವೆಂಬರ್ 18ರಂದು ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ. ನ್ಯಾಯಾಲಯದ ಸಿಬ್ಬಂದಿ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಈ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9 ಗಂಟೆಗೆ ನ್ಯಾಯಾಲಯದ ಆವರಣದಿಂದ ಜಾಥಾ ಆರಂಭವಾಗಲಿದ್ದು, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಮಾದಕ ದ್ರವ್ಯಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳು ಹಾಗೂ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸಲಿದೆ. ಈ ಜಾಗೃತಿ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಕೀಲರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನ್ಯಾಯಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನೋಂದಾಯಿತ ಕಚೇರಿ : 19-ಎ, ಧೂಲೇಶ್ವರ್ ಗಾರ್ಡನ್, ಜೈಪುರ, ರಾಜಸ್ಥಾನ, ಭಾರತ – 302001.

ಚಿನ್ನದ ಮೇಲೆ ಸಾಲ – "ಎಲ್ಲಿ ಏನಿದೆಯೋ ಹಾಗೆ"ಆಧಾರದ ಮೇಲೆ ಹರಾಜು ಸೂಚನೆ

ಕೆಳಗೆ ಉಲ್ಲೇಖಿಸಲಾದ ಸಾಲಗಾರರಿಗೆ, ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಬ್ಯಾಂಕ್") ನಿಂದ ಪಡೆದ ಚಿನ್ನದ ಮೇಲಿನ ಸಾಲ ಸೌಲಭ್ಯದ ಬಾಕಿ ಮೊತ್ತವನ್ನು ಹಾವಾಶುವಂತೆ ನೋಟಿಸ್‌ಗಳನ್ನು ನೀಡಲಾಗಿದೆ. ಸಾಲಗಾರರು ತಮ್ಮ ಬಾಕಿಯನ್ನು ಮರುಪಾವತಿಸಲು ವಿಫಲರಾಗಿರುವುದರಿಂದ, ಅಡವಿಟ್ಟಿರುವ ಚಿನ್ನದ ವಸ್ತುಗಳು/ಆಭರಣಗಳನ್ನು ದಿನಾಂಕ 21 ಡಿಸೆಂಬರ್ 2026 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ರವರೆಗೆ, ಕೆಳಗೆ ತಿಳಿಸಲಾದ ಶಾಖೆಗಳಲ್ಲಿ ಅಲ್ಲಿ ನಿಗದಿಪಡಿಸಿದ ವಿಧಾನದ ಪ್ರಕಾರ ಹರಾಜು ಮಾಡಲು ನಾವು ಅನಿವಾರ್ಯರಾಗಿದ್ದೇವೆ. ಸಾಲಗಾರರು ಮೃತಪಟ್ಟಿದ್ದಲ್ಲಿ, ಎಲ್ಲಾ ಪರತ್ತುಗಳು ಅವರ ಕಾನೂನುಬದ್ಧ ವಾರಸುದಾರರಿಗೆ ಅನ್ವಯಿಸುತ್ತವೆ. ಮೇಲಿನ ಹರಾಜು ವಿಫಲವಾದಲ್ಲಿ, ಯಾವುದೇ ಪೂರ್ವ ಸೂಚನೆ ನೀಡದೆ ಮತ್ತೊಂದು ಹರಾಜು ನಡೆಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ ಎಂಬುದನ್ನು ದಯವಿಟ್ಟು ಗಮನಿಸಿ.

ಭೌತಿಕ ಹರಾಜು ಶಾಖೆಯ ವಿವರಗಳು

ಸಾಲದ ಖಾತಾ ಸಂ.	ಗ್ರಾಹಕರ ಹೆಸರು	ಶಾಖೆ	ಸಾಲದ ಮೊತ್ತ (ರೂ.ಗಳಲ್ಲಿ)	ಸಾಲದ ಖಾತಾ ಸಂ.	ಗ್ರಾಹಕರ ಹೆಸರು	ಶಾಖೆ	ಸಾಲದ ಮೊತ್ತ (ರೂ.ಗಳಲ್ಲಿ)
L26660000753206	ಚೇತನ್ ಸನದಿ	ಅಥಣಿ	215000	L26660000676511	ಪರಶುರಾಮ	ಕೊಪ್ಪಳ	249500
L26660000753316	ಶಿವಾನಂದ ಫುಂಡಲೀಕಪ್ಪ ಕುರಿ	ಬೈಲಹೊಂಗಲ	135000	L26660000713233	ಪಲ್ಲವಿ ಕೆ ಆರ್	ಕೃಷ್ಣರಾಜನಗರ	162000
L26660000719492	ಸುರೇಖಾ ಕಾಂಬಳೆ	ಬೆಳಗಾವಿ	152000		ಶ್ರೀಕಾಂತ್	ಲಿಂಗಸಾಗೂರು	
L26660000714421	ಚನಬಸಯ್ಯ ಪಡದಯ್ಯ ಖನಗಾವಿ	ಬೆಳಗಾವಿ	239000	L26660000647926	ನಿತೀಶ್ ಕುಮಾರ್ ಎಂ ಆರ್	ಮಾಲೂರು	135000
				L26660000707065	ಸಂತೋಷ್ ಕುಮಾರ್ ಎನ್	ಮಾಲೂರು	240800
L26660000697071	ವೆಂಕಟೇಶ್	ಬಳ್ಳಾರಿ –	199700	L26660000682439	ಸಂತೋಷ್ ಕುಮ